**ದಿನಾಂಕಃ 25.01.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಶ್ರೀ ಎನ್ ಎಸ್ ವಕೀಲರಿಂದಃ-</u>**

2 ನೇ ಅರ್ಜಿದಾರಳಾದ ಸಾನ್ವಿ ನನ್ನ ಮಗಳು. ಅರ್ಜಿದಾರರ ಪೋಷಕರು ನನಗೆ ಮದುವೆ ಸಮಯದಲ್ಲಿ ರೂ.8.00 ಲಕ್ಷ ವರದಕ್ಷಿಣೆಯಾಗಿ ನನ್ನ ಖಾತೆಗೆ ನೀಡಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ರೂ. 2.00 ಲಕ್ಷ ನೀಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಮದುವೆ ಸಮಯದಲ್ಲಿ ಪಲ್ಸರ್ ಬೈಕ್ ಮತ್ತು 20 ಗ್ರಾಂ ನ ಚಿನ್ನದ ಆಭರಣಗಳನ್ನು ನೀಡಿದ್ದರು ಎಂದರೆ ಸರಿಯಲ್ಲ. ಮದುವೆಯಾದ ನಂತರ ನಾವು ಸಂತೆಬೆನ್ನೂರಿನಲ್ಲಿ ವಾಸವಾಗಿದ್ದೆವು. ನಮ್ಮೊಂದಿಗೆ ಪೋಷಕರು ಇದ್ದರು. ನಾನು ಮದುವೆ ಸಂದರ್ಬದಲ್ಲಿ ಪ್ರೌಢಶಾಲೆಯ ಶಿಕ್ಷಕನಾಗಿದ್ದೆ ಎಂದರೆ ಸರಿ. ಈಗಲೂ ಸಹ ನಾನು ಪ್ರೌಢಶಾಲೆಯ ಶಿಕ್ಷಕನಾಗಿದ್ದೇನೆ. ನಾನು ಎಂ.ಎ, ಬಿ ಎಡ್ ಮಾಡಿದ್ದೇನೆ ಎಂದರೆ ಸರಿ. ನನ್ನ ಇಲಾಖೆಯಲ್ಲಿ ಮುಂಬಡ್ತಿ ಇದೆ ಎಂದರೆ ಸರಿ. ಸಂತೆಬೆನ್ನೂರಿನಲ್ಲಿ ನಾನು ಮತ್ತು ನನ್ನ ತಾಯಿ ವರದಕ್ಷಿಣೆಗಾಗಿ 1 ನೇ ಅರ್ಜಿದಾರಳಿಗೆ ಮಾನಸಿಕ ಹಿಂಸೆ ನೀಡಿದ್ದೇವೆ ಎಂದರೆ ಸರಿಯಲ್ಲ. ಆಕೆಗೆ ಊಟ ಮತ್ತು ಮೂಲಭೂತ ಸೌಕರ್ಯಗಳನ್ನು ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ಅರ್ಜಿದಾರಳಿಗೆ ತೊಂದರೆ ನೀಡಿದ್ದರಿಂದ ಆಕೆ ನಮ್ಮ ಕುಟುಂಬದ ವಿರುದ್ದ ದಾವಣಗೆರೆಯ ಮಹಿಳಾ ಠಾಣೆಯಲ್ಲಿ ದಿಃ 25.03.2017 ರಂದು ದೂರು ನೀಡಿದ್ದರು ಎಂದರೆ ಸಾಕ್ಷಿಯು ನಾವು ತೊಂದರೆ ನೀಡಿರುವುದಿಲ್ಲ ಆದರೆ ದೂರನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿ ಬುದ್ದಿವಾದ ಹೇಳಿದ್ದರು ಎಂದರೆ ಸರಿಯಲ್ಲ. ಅರ್ಜಿದಾರಳನ್ನು ಮನೆಗೆ ಕರೆದುಕೊಂಡು ಬಂದು ಮತ್ತೆ ಆಕೆಗೆ ಹಿಂಸೆ ನೀಡಿದ್ದರಿಂದ ದಿಃ 27.04.2017 ರಂದು ಮಹಿಳಾ ಠಾಣೆಗೆ ದೂರು ಮತ್ತೊಮ್ಮೆ ನೀಡಿದ್ದಾರೆ ಎಂದರೆ ಸರಿಯಲ್ಲ. ಅವರು ನೀಡಿದ ದೂರಿನ ಅನ್ವಯ ನಮ್ಮ ವಿರುದ್ದ ಕ್ರೈಮ್ ನಂ 62ಃ2017 ರಂತೆ ಪ್ರಕರಣ ದಾಖಲಾಯಿತು ಎಂದರೆ ಸರಿ. ದೂರು ನೀಡಿದ ನಂತರ ನಾವು ಆಕೆಯನ್ನು ಮನೆಗೆ ಸೇರಿಸದ ಕಾರಣ ಆಕೆ ತವರು ಮನೆಗೆ ಹೋದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅವರು ತಾಯಿ ಮನೆಯಿಂದ ಬಂದು ದೂರನ್ನು ನೀಡಿ ನಂತರ ವಾಪಸ್ಸು ತವರು ಮನೆಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

1 ನೇ ಅರ್ಜಿದಾರರಿಗೆ ಜೀವನ ನಡೆಸಲು ಕಷ್ಟ ಆಗಿದ್ದರಿಂದ ಅವರು ಇದೇ ನ್ಯಾಯಾಲಯದಲ್ಲಿ ಜೀವನಾಂಶಕ್ಕಾಗಿ ಈ ಹಿಂದೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಅದರಲ್ಲಿ ನಾನು ಹಾಜರಾಗಿದ್ದೆ ಎಂದರೆ ಸರಿ. ಸದರಿ ಜೀವನಾಂಶದ ಅರ್ಜಿ ದಾಖಲಿಸಿದ ನಂತರ ನಮ್ಮ ನಡುವೆ ರಾಜಿ ಆಗಿ ಆಕೆಯನ್ನು ನಾನು ಮನೆಗೆ ಕರೆದುಕೊಂಡು ಹೋದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅವರೇ ಮನೆಗೆ ಬಂದಿರುತ್ತಾರೆ ಮತ್ತು ಸದರಿ ಅರ್ಜಿಯಲ್ಲಿ ನಾನು ರಾಜಿ ಅರ್ಜಿ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. 2017 ರಲ್ಲಿ 1 ನೇ ಅರ್ಜಿದಾರಳು ಮನೆಗೆ ಬಂದಿರುತ್ತಾರೆ. ಜೀವನಾಂಶದ ಅರ್ಜಿ ಮತ್ತು ಸಿ ಆರ್ 62ಃ2017 ರಲ್ಲಿ ರಾಜಿ ಮಾಡಿಕೊಂಡ ನಂತರ ಆಕೆ ಮನೆಗೆ ಬಂದರು ಎಂದರೆ ಸಾಕ್ಷಿಯು ಅವರು ಪ್ರಥಮವಾಗಿ ಮನೆಗೆ ಬಂದರು ನಂತರ ರಾಜಿ ಆಗಿದೆ ಎಂದು ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ

ಎಂದು ನುಡಿಯುತ್ತಾರೆ. ಜೀವನಾಂಶದ ಅರ್ಜಿ ರಾಜಿ ಮಾಡಿಕೊಂಡ ನಂತರ ಬಿ ವರದಿ ಸಲ್ಲಿಸಲಾಗಿದೆಯೋ ಅಥವಾ 1 ನೇ ಅರ್ಜಿದಾರಳು ಮನೆಗೆ ಬಂದ ನಂತರ ಬಿ ವರದಿ ಸಲ್ಲಿಸಲಾಗಿದೆಯೋ ಎಂದು ನನಗೆ ತಿಳಿದಿರುವುದಿಲ್ಲ.

1 ನೇ ಅರ್ಜಿದಾರಳು ಮನೆಗೆ ಬಂದ ನಂತರ ನಾವು ಗೊಲ್ಲರಹಳ್ಳಿಯಲ್ಲಿ ವಾಸವಾಗಿದ್ದೆವು. ಆ ಸಂದರ್ಬದಲ್ಲಿ ಮಗಳು ಸಾನ್ವಿ ಇದ್ದಳು. 1 ನೇ ಅರ್ಜಿದಾರಳು ಮತ್ತು 2 ನೇ ಅರ್ಜಿದಾರಳಿಗೆ ನಾನು ಯಾವುದೇ ಮೂಲಭೂತ ಸೌಕರ್ಯಗಳನ್ನು ನೀಡಿದೆ ಆಗಾಗ್ಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡುತ್ತಿದ್ದೆ ಎಂದರೆ ಸರಿಯಲ್ಲ. 1 ನೇ ಅರ್ಜಿದಾರಳಿಗೆ ರಾತ್ರಿ ದೈಹಿಕವಾಗಿ ಹಲ್ಲೆ ಮಾಡಿ ಆಕೆಯನ್ನು ಮನೆಯಿಂದ ಹೊರಹಾಕಿದೆ ಆಗ ಅಲ್ಲಿದ್ದ ಅಕ್ಕಪಕ್ಕದವರು 112 ಕ್ಕೆ ಕರೆ ಮಾಡಿ ಪೋಲಿಸರನ್ನು ಕರೆಸಿದ್ದರು ಮತ್ತು ಪೋಲಿಸರು ನಮ್ಮನ್ನು ಠಾಣೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿಯು 1 ನೇ ಅರ್ಜಿದಾರಳೇ ಉದ್ದೇಶಪೂರ್ವಕವಾಗಿ ಮನೆಯಿಂದ ಹೊರಬಂದು ಬಾಗಿಲನ್ನು ಹಾಕಿಕೊಂಡು ತನ್ನ ತಂದೆ ತಾಯಿಗೆ ಕರೆ ಮಾಡಿ 112 ಕ್ಕೆ ತಿಳಿಸಲು ಹೇಳಿ ನಮ್ಮನ್ನು ಮಧ್ಯರಾತ್ರಿಯಲ್ಲಿ ಠಾಣೆಗೆ ಹೋಗುವಂತೆ ಮಾಡಿ ಅವಮಾನ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನಗೂ ಮತ್ತು ನನ್ನ ತಂದೆಗೂ ಪೋಲಿಸರು ಠಾಣೆಯಲ್ಲಿ ಹಲ್ಲೆ ಮಾಡಿರುತ್ತಾರೆ.

ನನ್ನ ತಮ್ಮ ಸಿದ್ದೇಶ ಪೋಲಿಸ್ ಇಲಾಖೆಯಲ್ಲಿ ಆ ಸಮಯದಲ್ಲೂ ಕೆಲಸ ಮಾಡುತ್ತಿದ್ದರು. ಪೋಲಿಸರು ನಮಗೆ ಹಲ್ಲೆ ಮಾಡಿದ್ದಕ್ಕೆ ನಾನು ಅವರ ಹಿರಿಯ ಅಧಿಕಾರಿಗಳಿಗೆ ದೂರು ನೀಡಿರುವುದಿಲ್ಲ ಮತ್ತು ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ನಾವು ಮದ್ಯರಾತ್ರಿ ನೀಡಿದ ಸದರಿ ಕಿರುಕುಳಕ್ಕೆ ನಮ್ಮ ವಿರುದ್ದ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದರೆ ಸಾಕ್ಷಿಯು ನಾವು ಕಿರುಕುಳ ನೀಡಿರುವುದಿಲ್ಲ ಆದರೆ ಸುಳ್ಳು ದೂರು ನೀಡಲಾಗಿದೆ ಮತ್ತು ಸದರಿ ದೂರನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿ ಈಗ ಅದು ತಡೆಯಾಗಿದೆ ಎಂದು ನುಡಿಯುತ್ತಾರೆ.

ನಾನು 1 ನೇ ಅರ್ಜಿದಾರಳನ್ನು ಮದುವೆಯಾಗುವಾಗ ಆಕೆಗೆ 18 ವರ್ಷ ತುಂಬಿರಲಿಲ್ಲ ಎಂದರೆ ಸಾಕ್ಷಿಯು ನಮಗೆ ಆ ಬಗ್ಗೆ ತಿಳಿಸಿರಲಿಲ್ಲ ಮತ್ತು ನನಗೆ ತೋರಿಸಿದ ದಾಖಲೆಯಲ್ಲಿ ಆಕೆಗೆ 18 ವರ್ಷ ತುಂಬಿತ್ತು ಎಂದು ನುಡಿಯುತ್ತಾರೆ. ನನಗೆ 1 ನೇ ಅರ್ಜಿದಾರಳ ಶಾಲಾ ದಾಖಲಾತಿಯನ್ನು ತೋರಿಸಿದ್ದರು. ಗೊಲ್ಲರಹಳ್ಳಿ ನನ್ನ ಸ್ವಂತ ಊರು ಎಂದರೆ ಸರಿ. ಕ್ರೈಮ್ ನಂ 78ಃ2019 ದಾಖಲಾದಾಗ 1 ನೇ ಅರ್ಜಿದಾರಳು ಅವರ ತವರು ಮನೆಯಲ್ಲಿ ಇದ್ದರು. ನಾನು ದಾವಣಗೆರೆಯ ಕೌಟುಂಬಿಕ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನಕ್ಕೆ ಎಂ ಸಿ 112ಃ2019 ದಾಖಲಿಸಿದ್ದೆ ಎಂದರೆ ಸರಿ. ನನಗೆ ಆ ಸಮಯದಲ್ಲಿ 1 ನೇ ಅರ್ಜಿದಾರಳೊಂದಿಗೆ ಕೌಟುಂಬಿಕ ಜೀವನ ನಡೆಸಲು ಇಷ್ಟ ಇತ್ತು ಆದರೆ ಆಕೆ ನನ್ನ ಮತ್ತು ನನ್ನ ಕುಟುಂಬದ ವಿರುದ್ದ ಸುಳ್ಳು ಆರೋಪಗಳನ್ನು ಮಾಡಿ ಪ್ರಕರಣಗಳನ್ನು ದಾಖಲಿಸಿದ್ದರಿಂದ ನಾನು ವಿವಾಹ ವಿಚ್ಛೇದನೆ ಪಡೆಯಲು ಇಚ್ಚಿಸಿದ್ದೆ. ವಿವಾಹ ವಿಚ್ಛೇದನ ಪ್ರಕರಣ ದಾಖಲಿಸುವ ಮುನ್ನಾ ಸುಳ್ಳು ಆರೋಪ ಮಾಡಿ ಪ್ರಕರಣಗಳನ್ನು ದಾಖಲಿಸಿದ್ದೀರಿ ಎಂದು ನೋಟಿಸು ನೀಡಿರುವುದಿಲ್ಲ. ನಾನು ಕೌಟುಂಬಿಕ ಜೀವನ ಪುನರ್ ಪ್ರಾಪ್ತಿಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ.

ನಾನು ವಿವಾಹ ವಿಚ್ಛೇದನ ಅರ್ಜಿಯಲ್ಲಿ ನಾನು 1ನೇ ಅರ್ಜಿದಾರಳ ಅಂಚೆಚೋಮನಹಳ್ಳಿ ಮತ್ತು ಗೊಲ್ಲರಹಳ್ಳಿಯ ಎರಡೂ ವಿಳಾಸಗಳನ್ನೂ ನಮೂದಿಸಿದ್ದೆ, ಸಾಕ್ಷಿ ಮುಂದುವರೆದು ನಾವು ಮೊದಲು ಅಂಚೆಚೋಮನಹಳ್ಳಿಗೆ ನ್ಯಾಯಾಲಯದಿಂದ ನೋಟಿಸು ಕಳುಹಿಸಿದೆವು ಆದರೆ ಅವರು ತೆಗೆದುಕೊಳ್ಳಲಿಲ್ಲ, ಅವರು ಗೊಲ್ಲರಹಳ್ಳಿಗೆ ಬಂದಿದ್ದರು ಆದ್ದರಿಂದ ಗೊಲ್ಲರಹಳ್ಳಿಯ ವಿಳಾಸವನ್ನು ನಂತರ ನೀಡಿರುತ್ತೇನೆ. ನಾನು ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನ ಅರ್ಜಿ ಸಲ್ಲಿಸುವಾಗ ಎರಡು ವಿಳಾಸಗಳನ್ನು ನಮೂದಿಸಿದ್ದೆ. ಸಾಕ್ಷಿಯು ವಿವಾಹ ವಿಚ್ಛೇದನ ಅರ್ಜಿಯ ನಕಲು ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ಗುರುತಿಸುವಿಕೆಗಾಗಿ ನಿಪಿ-21 ಎಂದು ಗುರುತಿಸಲಾಯಿತು. ನನ್ನ ಅರ್ಜಿಯಲ್ಲಿ ಕೇವಲ ಗೊಲ್ಲರಹಳ್ಳಿಯ ವಿಳಾಸ ಇದೆ ಎಂದರೆ ಸಾಕ್ಷಿಯು ನಾವು ಮೊದಲು ಅಂಚೆಚೋಮನಹಳ್ಳಿಯ ವಿಳಾಸ ನೀಡಿದ್ದೆವು ಆನಂತರ ಗೊಲ್ಲರಹಳ್ಳಿಗೆ ಬಂದಿದ್ದಾರೆ ಎಂದು ತಿಳಿದ ಮೇಲೆ ಗೊಲ್ಲರಹಳ್ಳಿಯ ವಿಳಾಸವನ್ನು ಅರ್ಜಿಯಲ್ಲಿ ತಿದ್ದುಪಡಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದ ಅರ್ಜಿಯಲ್ಲಿ ಅಂಚೆಚೋಮನಹಳ್ಳಿಯ ವಿಳಾಸ ನಿಪಿ-21 ರಲ್ಲಿ ಕಾಣುತ್ತಿಲ್ಲ ಎಂದರೆ ಸರಿ.

ನಾನು ಸಲ್ಲಿಸಿದ ವಿವಾಹ ವಿಚ್ಛೇದನ ಅರ್ಜಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಕಡೂರಿನ ಮಾನ್ಯ ಹಿರಿಯ ನ್ಯಾಯಾಲಯಕ್ಕೆ ವರ್ಗಾವಣೆಯಾಯಿತು ಎಂದರೆ ಸರಿ. ಅಂಚೆಚೋಮನಹಳ್ಳಿಯ ವಿಳಾಸ ನಾವು ಸದರಿ ಅರ್ಜಿಯಲ್ಲಿ ತಿದ್ದುಪಡಿ ಮಾಡಿಲ್ಲ ಎಂದರೆ ಸರಿಯಲ್ಲ. ತಿದ್ದುಪಡಿ ಆದ ದಾಖಲೆಯನ್ನು ಹಾಜರುಪಡಿಸಬಹುದಾ ಎಂದರೆ ಸಾಕ್ಷಿಯು ಆ ಬಗ್ಗೆ ನಾನು ವಕೀಲರಿಗೆ ವಿಚಾರಿಸುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿವಾಹ ವಿಚ್ಛೇದನ ಪ್ರಕರಣ ಈಗಲೂ ಚಾಲ್ತಿಯಲ್ಲಿದೆ ಎಂದರೆ ಸರಿ.

ನಿಪಿ-10 ರಿಂದ 12 ರಲ್ಲಿ ನನಗೆ ತೋರಿಸಿರುವ ಸಂಬಳ ಸರಿ ಇದೆ. ನಿಪಿ-19 ಮತ್ತು 20 ರಲ್ಲಿ ಕಾಣುತ್ತಿರುವ ವೇತನ ಪ್ರಮಾಣಪತ್ರ ಸರಿ ಇದೆ. ಜುಲೈನಲ್ಲಿ ನನ್ನ ಒಟ್ಟು ಸಂಬಳ ರೂ.65,640-00 ಎಂದರೆ ಸರಿ. ನಿಪಿ-13 ರಿಂದ 17 ನನ್ನ ತಂದೆ ಹೆಸರಿನಲ್ಲಿರುವ ದಾಖಲೆಗಳು ಎಂದರೆ ಸರಿ. ನಿಪಿ-13 ರಿಂದ 16 ರಲ್ಲಿ ಅಡಿಕೆ ಬೆಳೆ ಎಂದು ನಮೂದು ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಕೆಲವು ಜಮೀನುಗಳಲ್ಲಿ ಅಡಿಕೆ ಬೆಳೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಟ್ಟು 8 ಎಕರೆ 30 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿಯು 7 ಎಕರೆ ಇರಬಹುದು ಎಂದು ನುಡಿಯುತ್ತಾರೆ. ಅಡಿಕೆ ಬೆಳೆಯಿಂದ ನಮ್ಮ ಕುಟುಂಬಕ್ಕೆ ವಾರ್ಷಿಕ 35 ರಿಂದ 40 ಲಕ್ಷ ಆದಾಯ ಇದೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯ ಪೋಷಣೆಯನ್ನು ನನ್ನ ಹಾಗೆ ನನ್ನ ತಮ್ಮನ್ನೂ ಸಹ ನಿಭಾಯಿಸಬೇಕು ಎಂದರೆ ಸರಿ. ನನ್ನ ತಮ್ಮ ಪೋಲಿಸ್ ಇಲಾಖೆಯಲ್ಲಿ ಇರುವುದರಿಂದ ಅವನಿಗೆ ಸರ್ಕಾರಿ ಸಂಬಳ ಬರುತ್ತದೆ ಎಂದರೆ ಸರಿ.

ನನಗೆ ಆರೋಗ್ಯ ಸರಿ ಇಲ್ಲಾ ಎಂದು ತಿಳಿಸಿರುತ್ತೇನೆ ಆದರೆ ಆ ಬಗ್ಗೆ ದಾಖಲೆ ಹಾಕಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ನನ್ನ ಪರವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಮಧ್ಯಂತರ ಜೀವನಾಂಶದ ಆದೇಶ ಆಗುವ ಮುನ್ನಾ ನಾನು ಅರ್ಜಿದಾರರಿಗೆ ಯಾವುದೇ ಜೀವನಾಂಶ,

ಊಟ, ವಸತಿ, ವಿದ್ಯಾಭ್ಯಾಸ, ಆರೋಗ್ಯದ ಖರ್ಚುಗಳನ್ನು ನೋಡಿಕೊಂಡಿಲ್ಲ ಎಂದರೆ ಸರಿ. ನಾನು ಮಧ್ಯಂತರ ಆದೇಶದ ವಿರುದ್ದ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೆ ಮತ್ತು ಅದು ವಜಾ ಆಯಿತು ಎಂದರೆ ಸರಿ. ಜಿಲ್ಲಾ ನ್ಯಾಯಾಲಯದ ಆದೇಶದ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ. ಮಧ್ಯಂತರ ಆದೇಶ ಆದ ನಂತರದಿಂದ ಇಲ್ಲಿಯವರೆಗೂ ನಾನು ಕೇವಲ ರೂ.15,000/- ಪಾವತಿ ಮಾಡಿದ್ದೇನೆ ಎಂದರೆ ಸರಿ. ನಾನು ಅರ್ಜಿದಾರರನ್ನು ವಾಪಸ್ಸು ಕರೆದುಕೊಂಡು ಹೋಗಲು ತಯಾರಿದ್ದೇನೆ. ನಾನು ವಿವಾಹ ವಿಚ್ಛೇದನ ವಾಪಸ್ಸು ಪಡೆದು ಕೌಟುಂಬಿಕ ಜೀವನ ಪುನರ್ ಪ್ರಾಪ್ತಿಗೆ ಅರ್ಜಿ ಸಲ್ಲಿಸಿರುವುದಿಲ್ಲ. ಜೀವನಾಂಶ ಪಾವತಿ ಮಾಡುವುದರಿಂದ ತಪ್ಪಿಸಿಕೊಳ್ಳಲು ನಾನು ಅರ್ಜಿದಾರರನ್ನು ವಾಪಸ್ಸು ಕರೆದುಕೊಂಡು ಹೋಗಲು ತಯಾರಿದ್ದೇನೆ ಎಂದು ಕೇವಲ ಮೌಖಿಕವಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸದರಿ ಉದ್ದೇಶ ಇರದ ಕಾರಣ ಕೌಟುಂಬಿಕ ಜೀವನ ಪುನರ್ ಪ್ರಾಪ್ತಿಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳಿಗೆ ಆದಾಯದ ಮೂಲ ಇದೆ ಎಂದು ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನನ್ನ ಮಗಳು ಪ್ರಜ್ಞಾ ಶಾಲೆಯಲ್ಲಿ 2 ನೇ ತರಗತಿಯಲ್ಲಿ ವಿದಾಭ್ಯಾಸ ಮಾಡುತ್ತಿದ್ದಾಳೆ ಸಾಕ್ಷಿ ಮುಂದುವರೆದು ನನಗೆ ಆಕೆಯನ್ನು ಭೇಟಿಯಾಗಲು ಬಿಡುತ್ತಿಲ್ಲ ಎಂದು ನುಡಿಯುತ್ತಾರೆ. ಮಗಳನ್ನು ಭೇಟಿಯಾಗಲು ಮತ್ತು ನೋಡಲು ನಾನು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ.

ನಿಪಿ-13 ರಿಂದ 17 ರಲ್ಲಿ ಕಾಣುವ ಆಸ್ತಿಗಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ನನಗೆ ಸಾಲ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ ಆದರೆ ಅದನ್ನು ಮುಂದಿನ ದಿನಗಳಲ್ಲಿ ಹಾಜರುಪಡಿಸುತ್ತೇನೆ. ನಾನು ಅರ್ಜಿದಾರರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿ ಕೌಟುಂಬಿಕ ದೌರ್ಜನ್ಯ ಎಸಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಕುಟುಂಬಕ್ಕೆ ಒಟ್ಟು ರೂ.50.00 ಲಕ್ಷಕ್ಕೂ ಹೆಚ್ಚು ವಾರ್ಷಿಕ ಆದಾಯ ಇದೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಜೀವನಾಂಶ ನೀಡಲು ಬದ್ದ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.